

ಸಮಯದಲ್ಲಿ ಹೋದರೆ ಈ ಗುಹೆಗಳ ಸೌಂದರ್ಯದ ಜೊತೆಗೆ ಹೂವಿನ ಸೌಂದರ್ಯವನ್ನೂ ನೋಡಬಹುದು. ಆಗ ಪ್ರವಾಸಿಗರೂ ಅಧಿಕ ಸಂಖ್ಯೆಯಲ್ಲಿರುತ್ತಾರೆ ಎಂದು ನಮ್ಮ ಗೈಡ್ ಹೇಳಿದ.

ಈ ಲೊಂಗ್‌ಮನ್ ಗುಹೆಗಳನ್ನು ಮುಖ್ಯವಾಗಿ ಎರಡು ರಾಜಮನೆತನಗಳ ಕಾಲದಲ್ಲಿ ಕಟ್ಟಲಾಯಿತು. ವೇಯ್ ಮನೆತನದ ಕಾಲದಲ್ಲಿ ರಾಜ್ಯದ ರಾಜಧಾನಿಯನ್ನು ದತೊಂಗ ಎನ್ನುವ ಪ್ರದೇಶದಿಂದ ಲ್ಯೋಯೊಂಗ್‌ಗೆ ಬದಲಾಯಿಸಲಾಯಿತು. ಆ ಸಮಯದಲ್ಲಿ ಈ ಕೆತ್ತನೆಗಳು ಆರಂಭವಾದವು. ಈ ಎಲ್ಲ ಕೆತ್ತನೆಗಳು ನಾಲ್ಕು ಹಂತದಲ್ಲಿ ಪೂರ್ಣಗೊಂಡವು. ಟಾಂಗ್ ಮನೆತನದ ಕಾಲದಲ್ಲಿ ಇಲ್ಲಿ ಬೌದ್ಧ ಧರ್ಮವು ಉಚ್ಛ್ರಾಯ ಸ್ಥಾನಕ್ಕೇರಿತ್ತು.

ಲೊಂಗ್‌ಮನ್ ಗುಹೆಗಳು 'ಯಿ' ನದಿಯ ಎರಡೂ ಕಡೆಗಳಲ್ಲಿ ಪೂರ್ವ ಮತ್ತು ಪಶ್ಚಿಮ ಗುಡ್ಡಗಳ ಮೇಲೆ ಇವೆ. 2,300ಕ್ಕಿಂತಲೂ ಹೆಚ್ಚು ಗುಹೆಗಳು, 1,10,000ರಷ್ಟು ಬುದ್ಧ ಮತ್ತು ಅವನ ಅನುಯಾಯಿಗಳ ಕೆತ್ತನೆಗಳು, ಸಾವಿರಾರು ಕಮಲದ ಹೂಗಳ ಕೆತ್ತನೆ, ನೂರಾರು ಶಾಸನಗಳು, 60ಕ್ಕೂ ಹೆಚ್ಚು ಗೋಪುರಗಳಿವೆ. ಬುದ್ಧನ ವಿಗ್ರಹಗಳು 25 ಮಿಲಿ ಮೀಟರಷ್ಟು ಚಿಕ್ಕ ಅಳತೆಯಿಂದ 17 ಮೀಟರಷ್ಟು ಬೃಹತ್ ಗಾತ್ರದಲ್ಲಿಯೂ ಇವೆ. ಅತಿ ಎತ್ತರದ ಬುದ್ಧನ ಕಿವಿಯ ಅಳತೆ 2 ಮೀಟರ್! ಕೆಲವು ಬುದ್ಧನ ವಿಗ್ರಹಗಳ ಮುಖ, ದೇಹ ತೆಳ್ಳಗಿದ್ದರೆ, ಇನ್ನು ಕೆಲವು ವಿಗ್ರಹಗಳು ಸ್ಥೂಲ ಕಾಯದವು.

**ಚೀನಾದಲ್ಲಿ ಐತಿಹಾಸಿಕ ಹಾಗೂ ನೈಸರ್ಗಿಕ ಸೌಂದರ್ಯದ ಯುನೆಸ್ಕೊ ಮಾನ್ಯತೆ ಪಡೆದ ತಾಣಗಳು ಹೇರಳವಾಗಿವೆ. ಇಲ್ಲಿನ ವ್ಯವಸ್ಥಿತ ವಿಶಾಲ ರಸ್ತೆಗಳು, ಅತಿ ವೇಗದ ಟ್ರೈನ್‌ಗಳು ಹಾಗೂ ವಿಮಾನಗಳು ಪ್ರಯಾಣವನ್ನು ಸರಳಗೊಳಿಸಿ ಹೆಚ್ಚು ಹೆಚ್ಚು ಪ್ರವಾಸಿಗರನ್ನು ಆಕರ್ಷಿಸುತ್ತಿವೆ. ಎರಡು ದಿನಗಳಲ್ಲಿ ಕಂಡ ಚೀನಾದ ಕೆಲವು ಐತಿಹಾಸಿಕ ಪ್ರದೇಶಗಳ ಪ್ರವಾಸಕಥನ ಇಲ್ಲಿದೆ.**

■ **ವಂದನಾ ಹೆಗಡೆ**

ಆಯಾ ರಾಜಮನೆತನದ ಸೌಂದರ್ಯದ ಕಲ್ಪನೆಯ ಪ್ರಕಾರ ಇವುಗಳನ್ನು ಬೇರೆ ಬೇರೆ ಮೈಕಟ್ಟಿನಲ್ಲಿ ಕಡೆಯಲಾಗಿದೆಯಂತೆ. ಹೆಚ್ಚಿನ ಕೆತ್ತನೆಗಳು ಪಶ್ಚಿಮ ಗುಡ್ಡದ ಮೇಲಿವೆ. ಪೂರ್ವದ ಪರ್ವತದ ಮೇಲೂ ಕೆಲವು ಕೆತ್ತನೆಗಳು, ಹಲವು ದೇವಸ್ಥಾನಗಳು ಇವೆ. ಚೀನಾ ಮತ್ತು ಜಪಾನ್ ನಡುವಿನ ಎರಡನೇ ಯುದ್ಧದ ಸಮಯದಲ್ಲಿ ಬಹಳಷ್ಟು ವಿಗ್ರಹಗಳು ಶಿಥಿಲಗೊಂಡಿವೆ. 2000ನೇ ಇಸ್ವಿಯಲ್ಲಿ ಯುನೆಸ್ಕೋ ವರ್ಲ್ಡ್ ಹೆರಿಟೇಜ್ ಲಿಸ್ಟ್‌ನಲ್ಲಿ ಸೇರ್ಪಡೆಗೊಂಡ ಈ ಜಾಗದ ಬಹಳಷ್ಟು ವಿಗ್ರಹಗಳನ್ನು ಈಗ ಜಪಾನ್ ಮತ್ತು ಅಮೆರಿಕದ ಮ್ಯೂಸಿಯಂಗಳಲ್ಲಿ ನೋಡಬಹುದಂತೆ.

'ಆರನೇ ಶತಮಾನ ಕಾಲದಲ್ಲಿ ಯುದ್ಧ ಮತ್ತು ಬಡತನದಿಂದ ಜನರು ಶಾಂತಿಯ ಹುಡುಕಾಟದಲ್ಲಿ ಬುದ್ಧನ ಅನುಯಾಯಿಗಳಾದರು. ಪುನರ್ಜನ್ಮದ ಕಲ್ಪನೆ, ತಮ್ಮನ್ನು ತಾವು ತಿಳಿದುಕೊಳ್ಳುವ ವಿಧಾನಗಳಿಂದ ಪ್ರಭಾವಿತರಾದರು. ಈ ರೀತಿ ಗುಹೆಯನ್ನು ಕಟ್ಟಿ, ಬುದ್ಧ ಮೂರ್ತಿ ಸ್ಥಾಪಿಸಿ ಧ್ಯಾನ ಮಾಡಿದರೆ ತಮಗೆ ಒಳಿತಾಗುತ್ತದೆ ಎಂಬ ನಂಬಿಕೆಯಿಂದ ಪ್ರತಿಯೊಬ್ಬರೂ ಮೂರ್ತಿ ಸ್ಥಾಪಿಸಿ ಧ್ಯಾನ ಮಾಡತೊಡಗಿದರು' ಎಂದು ನಮ್ಮ ಗೈಡ್ ವಿವರಿಸಿದ.

ಪಶ್ಚಿಮ ಪರ್ವತದ ಎಲ್ಲ ಕೆತ್ತನೆಗಳನ್ನು ನೋಡಿ, ಸೇತುವೆಯನ್ನು ದಾಟಿ ಪೂರ್ವದ ಕಡೆಗೆ ಬಂದಾಗ ಸುಮಾರು ನಾಲ್ಕು ಗಂಟೆ. ಪೂರ್ವದ ಗುಡ್ಡವನ್ನೇರಿ, ಅಲ್ಲಿನ ಎಲ್ಲ ದೇವಸ್ಥಾನಗಳನ್ನು, ಕೆತ್ತನೆಗಳನ್ನು ನೋಡಿ ಹೊರಬರುವ ದಾರಿಯಲ್ಲಿ